## ಲಕ್ಷ ಗಳಿಕೆ!

ಪ್ರತಿ ವರ್ಷ ಖರ್ಚುವೆಚ್ಚ ತೆಗೆದು ಒಂದೊಂದು ಕುಟುಂಬ ಲಕ್ಷದಿಂದ ಎರಡು ಲಕ್ಷ ರೂಪಾಯಿವರೆಗೂ ಸಂಪಾದಿಸುತ್ತದೆ. 'ಮೊದಲಿನಷ್ಟು ದುಡಿಮೆ ಈಗಿಲ್ಲ. ಅನೇಕರು ಬೇಸಾಯ ನಿಲ್ಲಿಸಿದ್ದು, ಕೃಷಿ ಕ್ಷೇತ್ರದಲ್ಲಿ ಯಂತ್ರಗಳು ಬಂದಿದ್ದಕ್ಕೆ ಕುಲುಮೆ ಸಲಕರಣೆಗಳ ಬಳಕೆ ತಗ್ಗಿದೆ. ಸಹಜವಾಗಿ ನಮ್ಮ ಆದಾಯವೂ ಕಮ್ಮಿ ಆಗಿದೆ. ಆದರೆ ಅವುಗಳ ಸಂಪೂರ್ಣ ಬಳಕೆ ನಿಂತಿಲ್ಲ. ಅದು ನಿಲ್ಲೋದೂ ಇಲ್ಲ ಬಿಡಿ. ಅದೊಂದೇ ನಮಗೆ ಸಮಾಧಾನ. ಒಟ್ಟಿನಲ್ಲಿ ಕರ್ನಾಟಕ, ಇಲ್ಲಿನ ಕೃಷಿಯಿಂದ ನಮ್ಮ ತುತ್ತಿನ ಚೀಲ ತುಂಬುತ್ತಿದೆ' ಎನ್ನುತ್ತಾರೆ ಸೀತಾ ಸೋಲಂಕಿ.

ಸಿಕ್ಕಾಪಟ್ಟೆ ಡಿಮ್ಯಾಂಡ್. ಹಾಗಾಗಿ, ಹೊರಗಿನಿಂದ ಬರುವ ಕಮ್ಮಾರರಿಗೆ ಸಾಕಷ್ಟು ಬೇಡಿಕೆ. ಇವರು ಇದ್ದಿಲನ್ನು ಸ್ಥಳೀಯ ದರಕ್ಕಿಂತ ಹೆಚ್ಚಿನ ಮೊತ್ತ ಕೊಟ್ಟು ಖರೀದಿಸುತ್ತಾರೆ. ಹಾಗಾಗಿ, ಹಳ್ಳಿ ಹೆಣ್ಣುಮಕ್ಕಳು ಇದ್ದಲನ್ನು ಯಾರಿಗೂ ಕೊಡದಂತೆ ವರ್ಷವಿಡೀ ಸಂಗ್ರಹಿಸಿಟ್ಟು, ಇವರ ಹಾದಿ ನೋಡುತ್ತಾರೆ.

ಮಳೆಗಾಲಕ್ಕೆ ಇಲ್ಲಿಗೆ ಬಂದವರು ತಮ್ಮೂರಿಗೆ ಮರಳುವುದು ಬೇಸಿಗೆಗೆ! ಬರೋಬ್ಬರಿ ಏಳೆಂಟು ತಿಂಗಳು ನಮ್ಮಲ್ಲಿರುತ್ತಾರೆ. ಬಿಜಾಪುರದಿಂದ ಕನಕಪುರ, ಮಂಡ್ಯದವರೆಗೂ, ಚಿತ್ರದುರ್ಗದಿಂದ ಪಶ್ಚಿಮಘಟ್ಟದ ಸೆರಗಿನ ಜಿಲ್ಲೆಗಳಲ್ಲಿ ಮತ್ತು ಒಮ್ಮೊಮ್ಮೆ ಅದರಾಚೆಯೂ ಓಡಾಡುತ್ತಾರೆ. ಉತ್ತರ ಕರ್ನಾಟಕದ ಮಂದಿಗೆ ಕುಡುಗೋಲು, ಗುದ್ದಲಿ, ಕೊಡಲಿ; ಬೆಂಗಳೂರು ಭಾಗದವರಿಗೆ ಮಚ್ಚು, ರಾಗಿ ಕೊಯ್ಯುವ ಕುಡುಗೋಲು, ಹಾರಿಗೋಲು, ಉದ್ದ ಮಚ್ಚು; ಮಲೆನಾಡು ಕಡೆ ಚಿಕ್ಕ ಕೊಡಲಿ, ಬಾಯಿ



ಊರಿಂದ ಊರಿಗೆ ಕುಲುಮೆ ಕಾರ್ಮಿಕರು

ಗುದ್ದಲಿ – ಹೀಗೆ ಆಯಾ ಭಾಗದಲ್ಲಿ ಹೆಚ್ಚು ಬೇಡಿಕೆ ಸಲಕರಣೆಗಳನ್ನು ಮಾಡಿಕೊಡುತ್ತಾರೆ.

## ಹೆಣ್ಮಕ್ಕೇ ಸ್ಟ್ರಾಂಗು!

ಇದ್ದಿಲು ಸಂಗ್ರಹಿಸುವುದು, ಬೆಂಕಿ ಹಾಕುವುದು, ಕೆಂಡ ಮಾಡಿ ನಂದದಂತೆ ನೋಡಿಕೊಳ್ಳುವುದು, ಕಬ್ಬಿಣದ ಸಲಕರಣೆಗಳನ್ನು ಬೆಂಕಿಯಲ್ಲಿ ಹಾಕಿ ಕೆಂಪಗಾಗುವಂತೆ ಕಾಯಿಸುವುದು, ಬಡಿದು ಹದ ಮಾಡುವುದು – ಹೀಗೆ ಎಲ್ಲದಕ್ಕೂ ಮನುಷ್ಯರೇ ಬೇಕು. ಒಟ್ಟಿನಲ್ಲಿ ಈ ಕಸುಬು ಸಂಪೂರ್ಣ ತೋಳಿನ ಬಲವನ್ನು ಅವಲಂಬಿಸಿದೆ. ಇಂತಹ ಕಠಿಣ ಮತ್ತು ಜಾಣ್ಮೆಯ ಕೆಲಸದಲ್ಲಿ ಮಹಿಳೆಯರೇ ಹೆಚ್ಚು ತೊಡಗಿಸಿಕೊಳ್ಳುವುದೇ ವಿಶೇಷ! ಈ ಗಟ್ಟಿಗಿತ್ತಿಯರು ಕಾದ ಕಬ್ಬಿಣವನ್ನು ಸುತ್ತಿಗೆಯಿಂದ ಉಸಿರು ತಿರುಗಿಸಿಕೊಳ್ಳಲೂ ಸಮಯ ಕೊಡದಷ್ಟು ವೇಗವಾಗಿ ಬಡಿಯುವುದನ್ನು ನೋಡಿದರೆ ಮೂಗಿನ ಮೇಲೆ ಬೆರಳಿಡಬೇಕು.

ದಶಕಗಳಿಂದ ಪ್ರತಿ ವರ್ಷ ಊರಿಗೆ ಬರುವ ಕಮ್ಮಾರರು ಹಳ್ಳಿಯ ಜನರಿಗೆ ವಾರ್ಷಿಕ ಅತಿಥಿಗಳು. ಇವರ ಮತ್ತು ನಮ್ಮ ಜನರ ಮಧ್ಯೆ ಅವಿನಾಭಾವ ಸಂಬಂಧ. ನಮ್ಮವರು ಅವರ ಕುಶಲೋಪರಿ ವಿಚಾರಿಸುವ, ತಂಗುವ ವ್ಯವಸ್ಥೆ ಮಾಡುವ, ಊಟಕ್ಕೆ ಅನ್ನ, ಕಾಳುಕಡಿ ನೀಡುವ ಒಂದು ಪರಂಪರೆ ಹಳ್ಳಿಗಳಲ್ಲಿ ಹಿಂದಿನಿಂದಲೂ ನಡೆದುಬಂದಿದೆ.

## ಕನ್ನಡಿಗರು ಹೃದಯವಂತರು

ನೀವು ನಿಮ್ಮ ಭಾಗದಲ್ಲಿ ಕುಲುಮೆ ಕೆಲಸ ಮಾಡದೆ, ಮನೆ–ಮಠ ಬಿಟ್ಟು ಸಾವಿರಾರು ಕಿ.ಮೀ. ಬಂದು ದುಡಿಯುವ ಅಗತ್ಯ ಏನಿದೆ? ಇಲ್ಲಿ ನಿಮಗೆ ಏನಾದರೂ ಅಪಾಯ ಹೇಗೆ? ಎಂದು ಪ್ರಶ್ನಿಸಿದರೆ, 'ನಮ್ಮಜ್ಜನ ಕಾಲದಿಂದ ಇಲ್ಲಿಗೆ ಬರ್‍ತಿದ್ದೀವಿ. ಇದುವರೆಗೂ ಎಳ್ಳಷ್ಟೂ ಸಮಸ್ಯೆ ಆಗಿಲ್ಲ. ನಮ್ಮನ್ನು ಹೊರಗಿನವರು ಅಂತ ಇಲ್ಲಿಯವರು ಎಂದೂ ನೋಡಿಲ್ಲ. ಪ್ರೀತಿಯಿಂದ ಮಾತನಾಡಿಸ್ತಾರೆ. ಯೋಗಕ್ಷೇಮ ನೋಡಿಕೊಳ್ತಾರೆ. ಊಟ, ಜೋಳ, ಅಕ್ಕಿ ಕೊಡ್ತಾರೆ. ಬೆಂಗಳೂರು ಕಡೆಗಂತೂ ನಾವು ಕೆಲಸ ಮಾಡುವಲ್ಲಿಗೇ ಪಾರ್ಸಲ್ ಊಟ ತಂದು, ಫಸ್ಟ್ ಊಟ – ಆಮೇಲೆ ಕೆಲಸ ಅನ್ನುತ್ತಾರೆ. ಮಕ್ಕಳು ಮರಿಗೆ ಹಾಲು, ಬ್ರೆಡ್, ಹೊಸ ಡ್ರೆಸ್, ನಮಗೆ ಚಾದರ... ಹೀಗೆ ಎಲ್ಲವನ್ನೂ ಪ್ರೀತಿಯಿಂದ ಕೊಡುತ್ತಾರೆ. ಕನ್ನಡಿಗರು ಹೃದಯವಂತರು...' ಎನ್ನುತ್ತಾ ಭಾವುಕರಾದರು ಬಾಬು ಸೋಲಂಕಿ.

ಕರ್ನಾಟಕವನ್ನು ಕರ್ಮಭೂಮಿಯನ್ನಾಗಿಸಿಕೊಂಡ ಈ ಕುಶಲಕರ್ಮಿಗಳು ಕನ್ನಡ ಕಲಿತಿದ್ದಾರೆ. ಕನ್ನಡದಲ್ಲೇ ಸ್ಪಷ್ಟವಾಗಿ ವ್ಯವಹರಿಸುತ್ತಾರೆ. 'ನಾವು ಮಹಾರಾಷ್ಟ್ರದವರೆಂದು ಇಲ್ಲಿಯವರು ಹಿಂದಿಯಲ್ಲಿ ಮಾತಿಗೆ ಇಳಿಯುತ್ತಾರೆ. ನಾವು ಕನ್ನಡದಲ್ಲಿಯೇ ಉತ್ತರಿಸುತ್ತೇವೆ. ನಮಗೆ ಕನ್ನಡದಲ್ಲಿ ಮಾತನಾಡುವುದೆಂದರೆ ಇಷ್ಟ. ಇಲ್ಲಿಂದ ವಾಪಾಸು ನಮ್ಮೂರಿಗೆ ಹೋಗುವಾಗ ಬೇಜಾರ್ ಆಗುತ್ತೆ' ಎಂದು ಅನುಭವ ಹಂಚಿಕೊಳ್ಳುತ್ತಾರೆ ಮಾಧವ.

ಪ್ರತಿಕ್ರಿಯಿಸಿ: feedback@sudha.co.in


SANDHILIN सन्धिलिन
ಸಂಧಿಲಿನ್

ಸಂಧಿಲಿನ್ ಹಚ್ಚಿ
ನೋವಿಗೆ
ವಿದಾಯ
ಹೇಳಿ!

ಶೀಘ್ರ ಪರಿಣಾಮಕಾರಿ




- ವಿವಿಧ ತರಹದ ನೋವಿಗೆ ಶೀಘ್ರ ಪರಿಣಾಮಕಾರಿ.
- ಕಳೆದ 14 ವರ್ಷಗಳಿಂದ ಲಕ್ಷಾಂತರ ಜನರ ಪ್ರಥಮ ಆಯ್ಕೆ.
- 'ಸಂಧಿಲಿನ್' ಲಿನಿಮೆಂಟ್‌ನ್ನು ಆಯುರ್ವೇದದ ಋಷಿಮುನಿ ಪ್ರಣೀತ ಶಾಸ್ತ್ರೋಕ್ತವಾಗಿ, ಅತ್ಯಾಧುನಿಕ ತಂತ್ರಜ್ಞಾನವನ್ನು ಅಳವಡಿಸಿ ತಯಾರಿಸಲಾಗಿದೆ.
- ಚರ್ಮ ಅಥವಾ ಬಟ್ಟೆಯ ಮೇಲೆ ಯಾವುದೇ ಜಿಡ್ಡು, ಕಲೆಗಳು ಉಂಟಾಗುವುದಿಲ್ಲ.

ತಯಾರಕರು

SDM AYURVEDA PHARMACY

ISO / GMP CERTIFIED

ಶ್ರೀ ಧರ್ಮಸ್ಥಳ
ಮಂಜುನಾಥೇಶ್ವರ ಆಯುರ್ವೇದ ಫಾರ್ಮಸಿ
ಕುತ್ಪಾಡಿ – 574 118, ಉಡುಪಿ ಜಿಲ್ಲೆ, ಕರ್ನಾಟಕ
Ph.: 0820 2520852, 89709 77513
Email: sdmaph@gmail.com

ಇದು 'SDM ಆಯುರ್ವೇದ ಫಾರ್ಮಸಿ'ಯ ಉತ್ಕೃಷ್ಟ ಗುಣಮಟ್ಟದ ಉತ್ಪನ್ನ